<u>**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**</u>

<u>**Spl.C No.**372/2021</u>

**PW**. 7

**CW**. 14

**ಸಾಕ್ಷಿಯ ಹೆಸರು –ಪ್ರಕಾಶ ಪಾಟೀಲ್**

**ತಂದೆಯ ಹೆಸರು –ಕಾಶಿನಾಥ**

**ವಯಸ್ಸು –33 ವರ್ಷಗಳು** ದಿನಾಂಕ <u>26–03–2026</u> ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಕಿರಿಯ ಇಂಜಿನಿಯರ್ , ಕೆ ಪಿ ಟಿ ಸಿ ಎಲ್**

**ವಾಸಸ್ಥಳ –ಅಥಣಿ , ಬೆಳಗಾವಿ ಜಿಃ**

<u>**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**</u>

ನಾನು ಆಗಸ್ಟ 2018 ರಿಂದ 2023 ರವರೆಗೆ ಸರಗೂರು ಉಪವಿಭಾಗ ಅಂತರಸಂತೆ ಚೆಸ್ ಕಾಂ ನಲ್ಲಿ ಕಿರಿಯ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಕೋರಿಕೆಯ ಮೇರೆಗೆ ಡಿ ಬಿ ಕುಪ್ಪೆ ಅರಣ್ಯ ವಲಯದ ಆನೆ ಮಾಳ ಗ್ರಾಮದ ಸರ್ವೇ ನಂ 1 ರ ಜಮೀನಿಗೆ ಹೋಗಿ ಆನೆ ಮೃತಪಟ್ಟಿರುವುದನ್ನು ನೋಡಿ, ಆನೆ ವಿದ್ಯುತ್ ಸಂಪರ್ಕದಿಂದ ಮೃತಪಟ್ಟಿರುವುದಾಗಿ ಗೊತ್ತಾಯಿತು. ವಿದ್ಯುತ್ ಪರಿವೀಕ್ಷಕರು ಸ್ಥಳಕ್ಕೆ ಬಂದಿದ್ದರು. ನಾವು ಸ್ಥಳ ಪರಿಶೀಲನೆ ಮಾಡಲಾಗಿ, ಆನೆ ಮೃತಪಟ್ಟಿದ್ದ ಜಾಗದಲ್ಲಿ ಸರ್ವೇ ನಂ 1 ರ ಜಮೀನಿನಲ್ಲಿ ಆರೋಪಿಯ ಮನೆ ಇದ್ದು, ಅವರ ಪತ್ನಿಯ ಹೆಸರಿಗೆ ನಮ್ಮ ಇಲಾಖೆಯಿಂದ ವಿದ್ಯುತ್ ಸಂಪರ್ಕ ನೀಡಿದ್ದೇವು. ಅವರ ಆರ್ ಆರ್ ನಂ. RGHDAL 38973 ಎಂದು ಇದ್ದು , 0.4 ಕೀ ವ್ಯಾಟ್ ವಿದ್ಯುತ್ ಸಂಪರ್ಕ ಮಾರ್ಚ 2009 ರಿಂದ ನೀಡಿದ್ದೇವು.

ದಿಃ 07-07-2019 ರಂದು ಸಂಜೆ 6.00 ರಿಂದ ಮರುದಿನ ಬೆಳಗ್ಗೆ 8.30 ರವರೆಗೆ ಮತ್ತು 8.35 ರಿಂದ 9.15 ರವರೆಗೆ ಸದರಿ ಮಾರ್ಗದಲ್ಲಿ 3 ಫೇಸ್ ವಿದ್ಯುತ್ ಇದ್ದ ಬಗ್ಗೆ ವರದಿ ನೀಡಿದ್ದೇನೆ. ಆರೋಪಿಯ ಜಮೀನಿನ ಪಕ್ಕದಲ್ಲಿ ರಸ್ತೆ ಇದ್ದು , ರಸ್ತೆ ಪಕ್ಕದಲ್ಲಿ ವಿದ್ಯುತ್ ಕಂಬವಿದೆ. ಆ ಬಗ್ಗೆ ನಾನು ನಮ್ಮ ಮೇಲಾಧಿಕಾರಿಗಳಿಗೆ ವರದಿ ನೀಡಿದ್ದೇನೆ. ನಮ್ಮ ಮೇಲಾಧಿಕಾರಿಗಳು ಕವಚಪತ್ರದೊಂದಿಗೆ ಪೊಲೀಸರಿಗೆ ಕಳುಹಿಸಿರುತ್ತಾರೆ. ಅದನ್ನು ಈಗ ನೋಡುತ್ತಿದ್ದು, ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು, ಕವಚಪತ್ರವನ್ನು ನಿಪಿ-9 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಎನ್ ಎಸ್ ಜಿ ವಕೀಲರಿಂದಃ-**

ಸದರಿ ಮಾರ್ಗದಲ್ಲಿ ಅಂತರಸಂತೆ ಸ್ಟೇಷನ ನಿಂದ ಡಿ ಬಿ ಕುಪ್ಪೆ ಅರಣ್ಯ ಕಛೇರಿಯ ಗೇಟ್ ವರೆಗೆ ವಿದ್ಯುತ್ ಹರಿಯುತ್ತದೆ. ಸದರಿ ಮಾರ್ಗವು ಅರಣ್ಯ ಮೂಲಕ ಹಾದು ಹೋಗುತ್ತದ್ದೆ ಎಂದರೆ ಸರಿ. ಹೈವೆ ಪಕ್ಕದಲ್ಲಿರುವ ಎಲ್ಲ ಜಮೀನುಗಳು ಅರಣ್ಯ ಇಲಾಖೆಗೆ ಸೇರಿವೆ ಎಂದರೆ ಸರಿಯಲ್ಲ. ಸದರಿ ವಿದ್ಯುತ್ ಲೈನ್ ನ ಕೆಳಗೆ ಬಿದಿರು ಮತ್ತು ವಿವಿಧ ಮರಗಳು ಬೆಳೆದಿವೆ ಎಂದರೆ ಸರಿ. ಅರಣ್ಯದಲ್ಲಿ ಆನೆಯು ವಿದ್ಯುತ್ ಲೈನ್ ಕೆಳಗೆ ಇದ್ದ ಬಿದಿರು ತಿನ್ನಲು ಹೋಗಿ ವಿದ್ಯುತ್ ಸಂಪರ್ಕಕ್ಕೆ ಸಿಲುಕಿ ಮೃತಪಟ್ಟಿದೆ ಎಂದರೆ ಸರಿಯಲ್ಲ. ನಿಪಿ-3 ರ ಫೋಟೋದಲ್ಲಿ ಕಾಣುವ ಜಾಗ ಅರಣ್ಯ ಇಲಾಖೆಗೆ ಸೇರಿದೆ ಎಂದರೆ ಸರಿ. ಆರೋಪಿಯ ಮನೆಗೆ ತೆಗೆದುಕೊಂಡಿದ್ದ ವಿದ್ಯುತ್ ವೈರ್ ದಿಂದ ಆನೆ ವಿದ್ಯುತ್ ಸಂಪರ್ಕಕ್ಕೆ ತಗುಲಿ ಮೃತಪಟ್ಟಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಅನೂಕೂಲ ಮಾಡಿಕೊಡಲು ನಿಪಿ-8 ಅನ್ನು ಸೃಷ್ಟಿ ಮಾಡಿ ನೀಡಿದ್ದೇನೆ ಎಂದರೆ ಸರಿಯಲ್ಲ.

**Spl.C No.372/2021**
**PW. 7**

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.